ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-7 Issue-5, March - April 2026, Pp. 49-57
©*IIMRD*, Mysuru

IIMRD JOURNALS
www.iimrd.com

# ಹಂಪಿಯ 'ಮಾಲ್ಯವಂತ' ಪರ್ವತ: ಚಿತ್ರದುರ್ಗದ ಅರಸ ಮತ್ತಿ ತಿಮ್ಮಣ್ಣನಾಯಕನ ದತ್ತಿ ಶಾಸನಗಳು

**ಡಾ.ರೇವಣಸಿದ್ದಪ್ಪ ಎಸ್**
ಸಹ ಪ್ರಾಧ್ಯಾಪಕರು, ಇತಿಹಾಸ ಮತ್ತು ಪ್ರಾಕ್ತನಶಾಸ್ತ್ರ ವಿಭಾಗ, ಸರ್ಕಾರಿ ಕಲಾ ಕಾಲೇಜು (ಸ್ವಾಯತ್ತ), ಚಿತ್ರದುರ್ಗ

**ಸಾರಾಂಶ: (Abstract)**

*ಚರಿತ್ರೆಯಲ್ಲಿ ಗೆದ್ದ ರಾಜರು ಕಟ್ಟಿಸಿದ 'ವಿಜಸ್ತಂಭ'ಗಳು, ಕೇವಲ ಕಲೆಯ ಕಟ್ಟಡಗಳಾಗಿರದೇ, ತಾವು ಗೆದ್ದ ಯುದ್ಧ ವಿಜಯದ ಘೋಷಣೆಗಳ ಸಂಕೇತಗಳಾಗಿರುತ್ತವೆ. ಅದೇ ರೀತಿ ರಾಜನೊಬ್ಬ ನೀಡಿದ ದಾನ–ದತ್ತಿಗಳು ಕೇವಲ ಆರ್ಥಿಕ ಮಿಗುತೆಯ ವೆಚ್ಚವಾಗಿರದೇ, ರಾಜನೊಬ್ಬನ ಗೌರವ ಮತ್ತು ನೈತಿಕತೆಯಿಂದ ಕೂಡಿದ, ಎಲ್ಲರಿಗೂ ಲೇಸನ್ನೇ ಬಯಸಿರುವ ಧರ್ಮವಿರುತ್ತದೆ. ಅದು ಜಾತಿ, ವರ್ಗ, ದ್ವೇಷ ಮತ್ತು ಅಸೂಯೆಗಳನ್ನು ತಿರಸ್ಕರಿಸಿರುವ ಸಂಕೇತವಾಗಿರುತ್ತದೆ. ನಮ್ಮ ರಾಜ, ಮಹಾರಾಜರು ಸ್ಥಾಪಿಸಿರುವ ಅದೆಷ್ಟೋ ದೇವಾಲಯ, ಗುಹಾಲಯ ಮತ್ತು ಸ್ಮಾರಕಗಳು ಕೇವಲ ಆ ಕಾಲದ ಕಟ್ಟಡಗಳಾಗಿರದೆ, ಅವರ ಸಂಸ್ಕೃತಿಯ ಚಾರಿತ್ರಿಕ ಬೇರುಗಳೊಂದಿಗೆ ನಮ್ಮನ್ನು ಬೆಸೆದುಕೊಳ್ಳುವ, ಶತಮಾನಗಳ ಹಿಂದಿನ ನಮ್ಮವರು ಬದುಕಿದ್ದ, ಅವರ ಬದುಕಿನ ವಾತಾವರಣದೊಂದಿಗೆ ನಾವು ಕಾಲಿಟ್ಟು ಒಂದಷ್ಟು ಕಾಲ ಜೀವಿಸುವ ಸಾರ್ಥಕ ಕ್ಷಣವಾಗಿರುತ್ತದೆ. ಈ ನಿಟ್ಟಿನಲ್ಲಿ, ವಿಜಯನಗರ ಸಾಮ್ರಾಜ್ಯದ ಕಾಲಘಟ್ಟದಲ್ಲಿ ಹೊಳಲ್ಕೆರೆ ಮತ್ತು ಪಿರಿಯೂರಿನ ಪಾಳೆಯಪಟ್ಟಿಗೆ ಅಮರನಾಯಕನಾಗಿದ್ದ ಮತ್ತಿ ತಿಮ್ಮಣ್ಣನಾಯಕ ವಿಜಯನಗರದ ಮಾಲ್ಯವಂತ ಪರ್ವತದಲ್ಲಿ, ಮಾಲ್ಯವಂತ ರಾಮಾನುಜಜೀಯ್ಯನಿಗೆ ಹಾಗೂ ವಿಜಯನಗರದ ಅರಸು ತಿರುಮಲರಾಯನಿಗೆ ಪುಣ್ಯವನ್ನು ಬಯಸಿ, ಹಂಪಾವಿರುಪಾಕ್ಷ ಮತ್ತು ಶ್ರೀಮಾಲ್ಯವಂತ ರಘುವಂಥನಾಯಕನ ಸನ್ನಿಧಿಯಲ್ಲಿ ದಾನ ನೀಡಿರುವ ಮಾಹಿತಿಯನ್ನು, ಅಂದಿನ ಸಾಂಸ್ಕೃತಿಕ ಸಂದರ್ಭಗಳನ್ನು ಪ್ರಸ್ತುತ ಲೇಖನದಲ್ಲಿ ದಾಖಲಿಸಲಾಗಿದೆ.*

**ಮುಖ್ಯಪದಗಳು (Keywords):** *ಕರ್ನಾಟಕ ಇತಿಹಾಸ, ಹಂಪಿ, ಮಾಲ್ಯವಂತ ಪರ್ವತ, ಮತ್ತಿ ತಿಮ್ಮಣ್ಣನಾಯಕ, ದತ್ತಿ ಶಾಸನಗಳು*

## ಪೀಠಿಕೆ

ವಿಜಯನಗರ ಸಾಮ್ರಾಜ್ಯ ಕ್ರಿ.ಶ. 1336ರಲ್ಲಿ ಸ್ಥಾಪನೆಯಾಯಿತು. ಇದು ಕೇವಲ ದಕ್ಷಿಣ ಭಾರತಕ್ಕಷ್ಟೆ ಅಲ್ಲದೆ, ಇಡೀ ಮಧ್ಯಯುಗೀನ ಭಾರತದಲ್ಲಿಯೇ ಮಹತ್ವದ ಘಟನೆಯಾಗಿತ್ತು. ವಿಘಟಿತ ಆಡಳಿತ ವ್ಯವಸ್ಥೆಯನ್ನು ಹೊಂದಿದ್ದ ವಿಜಯನಗರ ಆಡಳಿತ ವ್ಯವಸ್ಥೆಯಲ್ಲಿ 'ನಾಯಂಕರ' ಪದ್ಧತಿ ಮಹತ್ವದ್ದು.

ಮಧ್ಯಯುಗೀನ ದಕ್ಷಿಣ ಭಾರತದ ಚರಿತ್ರೆಯ ಅತ್ಯಂತ ಪ್ರಮುಖ ಮತ್ತು ನಿರ್ಣಾಯಕ ಯುದ್ಧ 'ತಾಳಿಕೋಟೆ ಕದನ'. ಈ ಕದನದ ಪರಿಣಾಮ ಪ್ರಾಂತೀಯ ಅಮರನಾಯಕರು ಸ್ವತಂತ್ರರಾದರು. ಕೃಷ್ಣದೇವರಾಯನ ಕಾಲದಲ್ಲಿ ನಾಯಂಕರ ಪದ್ಧತಿ ಹೆಚ್ಚು ಮಹತ್ವ ಪಡೆದಿತ್ತು. ಅಮರನಾಯಕ ಪ್ರಾದೇಶಿಕ ಸಾಮಂತಶಾಹಿತ್ವ ಮತ್ತು ಅಮರಮಾಗಣಿಗಾಗಿ ರಾಜನಿಗೆ ಸೈನಿಕ ಸಹಾಯ ಮಾಡುತ್ತಿದ್ದ. ರಾಜ ತನ್ನ ಸೈನ್ಯಕ್ಕಾಗಿ ಸಾಮಂತರ ಸಾಮಂತತ್ವವನ್ನು ಒಪ್ಪಿರುತ್ತಿದ್ದನು. ರಾಜ ಸಾಮಂತರಿಗೆ ಅಮರನಾಯಕ ಮತ್ತು ಅಮರಮಾಗಣಿಯನ್ನು ನೀಡುತ್ತಿದ್ದನು. ಅಮರನಾಯಕರು ತಮ್ಮ ಮುಂದಾಳತ್ವದಲ್ಲಿದ್ದ ಸ್ಥಳಗಳಲ್ಲಿ ಹಾಗೂ ಪ್ರಾದೇಶಿಕ ವ್ಯಾಪ್ತಿಗಳಲ್ಲಿ ವಾರಸುದಾರರಾಗಿ ಪರಿವರ್ತನೆಗೊಂಡಿದ್ದರು.

ಇಂಥ ಆಡಳಿತ ವ್ಯವಸ್ಥೆಯ ಭಾಗವಾಗಿಯೇ ಚಿತ್ರದುರ್ಗದ ಪಾಳೆಯಗಾರರು, ಕ್ರಿ.ಶ. ಹದಿನಾರನೇ ಶತಮಾನದ ಪ್ರಥಮಾರ್ಧದಲ್ಲಿ ಚಿತ್ರದುರ್ಗವನ್ನು ಕೇಂದ್ರವಾಗಿಟ್ಟುಕೊಂಡು, ತಾಳಿಕೋಟೆ ಕದನದ ತರುವಾಯ ಸ್ವತಂತ್ರ ಸಂಸ್ಥಾನವನ್ನು ಸ್ಥಾಪಿಸಿಕೊಂಡರು. ಚಿತ್ರದುರ್ಗ ಪಾಳೆಯಗಾರರ ರಾಜಕೀಯ ಚರಿತ್ರೆಯನ್ನು ಉದ್ಘಾಟಿಸಿದವನು ಮತ್ತಿ ತಿಮ್ಮಣ್ಣನಾಯಕ. ಚಿತ್ರದುರ್ಗ ಸಂಸ್ಥಾನವನ್ನು ಆಳ್ವಿಕೆ ಮಾಡಿದ್ದ ಮೂರು ಸಂತತಿಗಳಲ್ಲಿ ಮೊದಲ ಮತ್ತಿ ಸಂತತಿಗೆ ಸೇರಿದ್ದವನಾದ್ದರಿಂದ ಇವನು ಚಿತ್ರದುರ್ಗ ಸಂಸ್ಥಾನದ ಚರಿತ್ರೆಯಲ್ಲಿ 'ಮತ್ತಿ ತಿಮ್ಮಣ್ಣನಾಯಕ' ಎಂದೇ ಗುರುತಿಸಲ್ಪಟ್ಟಿದ್ದಾನೆ. ಬಿಳಿಚೋಡು ಮತ್ತು ಶ್ಯಾಗಲೆ ಅಥವಾ ಸಾಗಲೆ ಸಂತತಿಗಳು ಕ್ರಮವಾಗಿ ಆಡಳಿತ ನಡೆಸಿದ್ದ ಮತ್ತೆರಡು ಸಂತತಿಗಳು. ಕೊನೆಯ ಸಾಗಲೆ ಸಂತತಿಯ ಆಡಳಿತದ ಬಗ್ಗೆ ನಿಖರ ಮಾಹಿತಿಗಳಿಲ್ಲ ಅಥವಾ ಆಡಳಿತದಿಂದ ದೂರವೇ ಉಳಿದಿತ್ತು ಎಂದು ಹೇಳುವುದೇ ಸೂಕ್ತ. ಆ ವೇಳೆಗಾಗಲೇ ಸಂಸ್ಥಾನ ಹೈದರಾಲಿಯ ಯುದ್ಧಗಳ ಕಾರಣದಿಂದ ಅವನತಿ ಹೊಂದಿತ್ತು.

ವಿಜಯನಗರದ ಅಮರನಾಯಕನಾಗಿದ್ದ ಮತ್ತಿ ತಿಮ್ಮಣ್ಣನಾಯಕ ಕ್ರಿ.ಶ. 1565ರ ತಾಳಿಕೋಟೆ ಕದನದ ಪರಿಸ್ಥಿತಿಯ ಯಜಮಾನನಾಗಿದ್ದ. ವಿಜಯನಗರ ಸಾಮ್ರಾಜ್ಯ ಅವನತಿಯಾದಾಗ ತಿಮ್ಮಣ್ಣನಾಯಕ ತನಗೆ ಅನುಕೂಲವಾಗಿದ್ದ ಸನ್ನಿವೇಶವನ್ನು ಮತ್ತು ಸ್ಥಾನವನ್ನು ಸಂಪೂರ್ಣ ಪ್ರಯೋಜನ ಪಡಿಸಿಕೊಳ್ಳಲು ಸಿದ್ಧತೆ ಮಾಡಿಕೊಂಡಿದ್ದ. ಚಿತ್ರದುರ್ಗ ಕೇಂದ್ರವಾಗಿಟ್ಟುಕೊಂಡು ಸಂಸ್ಥಾನ ಸ್ಥಾಪಿಸುವ ಮೊದಲು ಕ್ರಿ.ಶ. 1565ರಲ್ಲಿ ಹಿರಿಯೂರಿನಲ್ಲಿ ಆಳ್ವಿಕೆ ನಡೆಸುತ್ತಿದ್ದನು. ಇದನ್ನು ಹಿರಿಯೂರಿನ ಹಳೆವೂರಿನ ಶಾಸನ ದೃಢಪಡಿಸುತ್ತದೆ. ಹಳೆವೂರಿನಲ್ಲಿ ದೊರೆತಿರುವ ತಿಮ್ಮಣ್ಣನಾಯಕನ ಶಾಸನವನ್ನು ಆಧಾರವಾಗಿಟ್ಟುಕೊಂಡು, ಹಿರಿಯೂರು ಈ ವಂಶದವರು ಆಡಳಿತ ನಡೆಸಿದ್ದ ಮೊದಲ ಪ್ರದೇಶವಾಗಿತ್ತು ಎಂದು ಹೇಳಬಹುದು.

ತಿಮ್ಮಣ್ಣನಾಯಕನಿಗೆ ಸಂಬಂಧಿಸಿದಂತೆ ಇದೂವರೆಗೆ ಎಂಟು ಶಾಸನಗಳು ಕಂಡುಬಂದಿವೆ. ಅವುಗಳಲ್ಲಿ ಒಂದು ತಾಮ್ರಶಾಸನ, ಉಳಿದವು ಶಿಲಾಶಾಸನಗಳು. ತಿಮ್ಮಣ್ಣನಾಯಕನ ಶಾಸನಗಳೆಲ್ಲವೂ ದಾನಶಾಸನಗಳೇ ಆಗಿವೆ. ಹಳೆವೂರಿನ ಶಾಸನ ಇವನು ಹೊರಡಿಸಿದ ಮೊದಲ ಶಾಸನ ಹಾಗೂ ಚಿತ್ರದುರ್ಗ ಪಾಳೆಯಗಾರರ ಮೊದಲ ಶಾಸನವಾಗಿದೆ. ಭಾಷೆ ಮತ್ತು ಲಿಪಿಗಳ ಹಿನ್ನೆಲೆಯಲ್ಲಿ ಗಮನಿಸಿದಾಗ, ಏಳು ಶಾಸನಗಳು ಕನ್ನಡ ಲಿಪಿ ಮತ್ತು ಭಾಷೆಯಲ್ಲಿ ಬರೆಯಲ್ಪಟ್ಟಿದ್ದರೆ, ಒಂದೇ ಒಂದು ಶಾಸನ ಮಾತ್ರ ತೆಲುಗು ಭಾಷೆ ಮತ್ತು ಲಿಪಿಯಲ್ಲಿ ಬರೆಯಲ್ಪಟ್ಟಿದೆ.

**ಮತ್ತಿ ತಿಮ್ಮಣ್ಣನಾಯಕನ ಶಾಸನಗಳು**[1]

| | ಶಾಸನ ದೊರೆತ ಗ್ರಾಮ | ಕಾಲ | ಭಾಷೆ | ಲಿಪಿ | ಸ್ವರೂಪ |
|---|---|---|---|---|---|
| 1. | ಹಳೆವೂರು | 1556 | ಕನ್ನಡ | ಕನ್ನಡ | ಶಿಲಾಶಾಸನ |
| 2. | ಪಾಲವ್ವನಹಳ್ಳಿ | 1557 | ಕನ್ನಡ | ಕನ್ನಡ | ಶಿಲಾಶಾಸನ |
| 3. | ಹೊಳಲ್ಕೆರೆ | 1568 | ಕನ್ನಡ | ಕನ್ನಡ | ತಾಮ್ರಶಾಸನ |
| 4. | ಹೊಳಲ್ಕೆರೆ | 1568 | ಕನ್ನಡ | ಕನ್ನಡ | ಶಿಲಾಶಾಸನ |
| 5. | ರೆಡ್ಡಿಹಳ್ಳಿ | 1576 | ಕನ್ನಡ | ಕನ್ನಡ | ಶಿಲಾಶಾಸನ |
| 6. | ರೊಟ್ಟಿಹಳ್ಳಿ | 1581 | ಕನ್ನಡ | ಕನ್ನಡ | ಶಿಲಾಶಾಸನ |
| 7. | ರಂಗಸಮುದ್ರ | 1583 | ಕನ್ನಡ | ಕನ್ನಡ | ಶಿಲಾಶಾಸನ |
| 8. | ರಂಗಸಮುದ್ರ | 1583 | ತೆಲುಗು | ತೆಲುಗು | ಶಿಲಾಶಾಸನ |

ಮತ್ತಿ ತಿಮ್ಮಣ್ಣನಾಯಕ ತನ್ನ ರಾಜ್ಯನಿಷ್ಠೆಗೆ ಪೂರ್ವಜರಂತಿದ್ದ ವಿಜಯನಗರದ ಲಕ್ಷಣಗಳನ್ನು ಮತ್ತು ಸಂಪ್ರದಾಯಗಳನ್ನು ಮುಂದುವರೆಸಿದ್ದನು. ತನ್ನ ಔತ್ತರೇಯ ಸರೀಕರಂತಿದ್ದ ವಿಜಯನಗರದಂತೆ ಶಾಸನಗಳನ್ನು ಹೊರಡಿಸುವ ಪರಂಪರೆಯ ಮುಂದುವರಿಕೆ ಇವನ ಶಾಸನಗಳ ಲಕ್ಷಣಗಳಿಂದ ದೃಢಪಡುತ್ತದೆ. ಇವನ ಕಾಲದ ಶಾಸನಗಳು ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ ಹಾಗೂ ರಾಜಕೀಯ ದೃಷ್ಟಿಯಿಂದ ಗಮನಾರ್ಹವಾಗಿವೆ. ಆದರೆ, ಇವನ ಶಾಸನಗಳು ಚಿತ್ರದುರ್ಗದಲ್ಲಿ ದೊರೆಯದಿರುವುದು ಆಶ್ಚರ್ಯವಾಗಿದೆ.

**ಮಾಲ್ಯವಂತ ಚಾರಿತ್ರಿಕ ಹಿನ್ನಲೆ**

ಮಾಲ್ಯವಂತದ ಬಗ್ಗೆ ಅತ್ಯಂತ ಪ್ರಾಚೀನ ದಾಖಲೆ ರಾಮಾಯಣದ ಉತ್ತರಕಾಂಡದಲ್ಲಿದೆ. ಒಬ್ಬ ರಾಕ್ಷಸನಾಗಿ ದಾಖಲಾಗಿರುವ ಮಾಲ್ಯವಂತ, ವಿದ್ಯುತ್ಕೇಶನ ಮಗನಾದ ಸುಕೇಶನೆಂಬ ರಾಕ್ಷಸನಿಂದ ಗ್ರಾಮಣಿಯೆಂಬ ಗಂಧರ್ವನ ಮಗಳಾದ ದೇವವತಿಯಲ್ಲಿ ಜನಿಸಿದ್ದವನು. ಮಾಲಿ ಮತ್ತು ಸುಮಾಲಿ ಎಂಬುವರು ಇವನ ಒಡಹುಟ್ಟಿದವರು. ಈ ಮೂವರು ಬ್ರಹ್ಮನಿಂದ ವರ ಪಡೆದು ವಿಶ್ವಕರ್ಮನಿಂದ ಲಂಕಾಪಟ್ಟಣವನ್ನು ನಿರ್ಮಿಸಿಕೊಂಡು ರಾಜ್ಯಭಾರ ಮಾಡುತ್ತಿದ್ದರು. ಇವನು ಗಂಧರ್ವ ಸ್ತ್ರೀ ನರ್ಮದೆಯ ಮಗಳಾದ ಸುಂದರಿ ಎಂಬುವಳನ್ನು ವಿವಾಹವಾಗಿದ್ದನು. ಇವರಿಗೆ ವಜ್ರಮುಷ್ಟಿ, ವಿರೂಪಾಕ್ಷ, ದುರ್ಮುಖ, ಸುಪ್ತಘ್ನ, ಯಜ್ಞಕೋಪ, ಉನ್ಮತ್ತರೆಂಬ ಆರುಜನ ಪುತ್ರರು ಮತ್ತು ಆನಲೆಯೆಂಬ ಒಬ್ಬ ಮಗಳು ಜನಿಸಿದ್ದರು. ಮಾಲ್ಯವಂತ ತನ್ನ ಇನ್ನಿಬ್ಬರು ಸಹೋದರರೊಂದಿಗೆ ದೇವತೆಗಳ ಮೇಲೆ ದಾಳಿಮಾಡಿದ್ದನು. ಕೊನೆಗೆ, ಸಹೋದರ ಮಾಲಿ ವಿಷ್ಣುವಿನಿಂದ ಹತನಾಗಿದ್ದರಿಂದ, ತನ್ನ ಮತ್ತೊಬ್ಬ ಸಹೋದರ ಸುಮಾಲಿಯೊಂದಿಗೆ ಪಾತಾಳ ಸೇರಿದನು. ಇದು ರಾಮಾಯಣದಲ್ಲಿ ಮಾಲ್ಯವಂತನ ಬಗ್ಗೆ ದೊರೆಯುವ ಮಾಹಿತಿಯಾಗಿದೆ.[2]

ಮಾಲ್ಯವಂತ ಎಂಬುದು ಒಂದು ಪರ್ವತದ ಹೆಸರು. ಇದು, ಹಂಪೆಯ ಬಳಿ ಕಿಷ್ಕಿಂಧೆಗೆ ಸಮೀಪದಲ್ಲಿದೆ. ಪೂರ್ವಘಟ್ಟಗಳ ಈಶಾನ್ಯ ಭಾಗದಲ್ಲಿ ಕಡಪ, ಕರ್ನೂಲು, ನೆಲ್ಲೂರು, ಗುಂಟೂರು ಜಿಲ್ಲೆಗಳಲ್ಲಿ ಹಬ್ಬಿರುವ ಇದು ಪ್ರಸ್ರವಣವೆಂದು ನಾಮಾಂತರ ಹೊಂದಿದೆ.[3] ಮಾಲ್ಯವಂತವೆಂದು ಕರೆಯುವ ಈ ಬೆಟ್ಟವನ್ನು ಮಾಲ್ಯವಂತ ರಘುನಾಥಬೆಟ್ಟವೆಂಬ ಹೆಸರಿನಿಂದಲೂ ಗುರುತಿಸಲಾಗುತ್ತಿದೆ.[4] ಈ ಮಾಲ್ಯವಂತ ಬೆಟ್ಟದಲ್ಲಿ ವೈಷ್ಣವ ಹಾಗೂ ಶೈವಧರ್ಮದ ಕುರುಹುಗಳೂ ಕಂಡುಬರುತ್ತವೆ. ಈ ಮಾಲ್ಯವಂತ ರಘುನಾಥವು ಕ್ರಿ.ಶ. 1559 ರಿಂದಲೂ ಪ್ರಸಿದ್ಧವಾಗಿದೆ. ವಿಜಯನಗರದ ದೊರೆ ಸದಾಶಿವರಾಯನ ಕಾಲದ ಶಾಸನವೊಂದು ಛತ್ರದಹಳ್ಳಿಯ ಪ್ರಜೆಗಳು, ಮಾಲ್ಯವಂತ ರಘುನಾಥ ದೇವರ ಅಮೃತಪಡಿಗೆ ದಾನ ನೀಡಿದ್ದರ ಬಗ್ಗೆ ಮಾಹಿತಿ ನೀಡುತ್ತದೆ.

ಮಾಲ್ಯವಂತ ಪರ್ವತವನ್ನು ಕುರಿತು ಪ್ರಾಚೀನ ಕನ್ನಡ ಸಾಹಿತ್ಯ, ವಿಭಿನ್ನ ಹಾಗೂ ವಿಫುಲ ಮಾಹಿತಿಗಳನ್ನು ದಾಖಲಿಸಿಕೊಂಡಿದೆ. ಕೆಳದಿಯ ಬಸಪ್ಪನಾಯಕನ ಶಿವತತ್ವ ರತ್ನಾಕರದಲ್ಲಿ ಮಾಲ್ಯವಂತ ಪರ್ವತವನ್ನು ಬೆಳ್ಳಿಯ ಪರ್ವತದಂತೆ ವರ್ಣಿಸಲಾಗಿದೆ. ಪಂಪಮಹಾತ್ಮೆಯಲ್ಲಿ ವಿಭಿನ್ನ ಕಥೆಗಳು ಕಂಡುಬರುತ್ತವೆ. ಇದರ ಪ್ರಕಾರ ಹಂಪಿ ಪರಿಸರದಲ್ಲಿ ಮತಂಗಗಿರಿ, ಹೇಮಕೂಟ, ಗಂಧರ್ವಗಿರಿ, ಜಂಬೂನಾಥಗಿರಿ ಮೊದಲಾದ ಗಿರಿಗಳಂತೆ, ಮಾಲ್ಯವಂತ ಗಿರಿಯೂ ಪುಣ್ಯ ಗಿರಿಯೆನಿಸಿದೆ.

ಪಂಪಮಹಾತ್ಮೆಯಲ್ಲಿ ಮುಂದುವರೆದು ದಾಖಲಾಗಿರುವ ಕೇರಳದ ಹೂಗಾರನ ಕಥೆ ವಿಶೇಷವೆನಿಸುತ್ತದೆ. ಇದರ ಪ್ರಕಾರ, ಕೇರಳದಲ್ಲಿ ರಾಜನೊಬ್ಬನಿಗೆ ಪೂಜೆಗಾಗಿ ಹೂಮಾಲೆಗಳನ್ನು ತಯಾರಿಸಿಕೊಡಲು ಮಾಲ್ಯವಂತನೆಂಬ ಒಬ್ಬ ಹೂಗಾರನಿದ್ದ. ಒಮ್ಮೆ ಅವನು ತಯಾರಿಸಿದ್ದ ಹೂಮಾಲೆಯಲ್ಲಿ ಸ್ತ್ರೀಯ ಕೂದಲೊಂದು ಸೇರಿಕೊಂಡಿದ್ದು ರಾಜನ ಕೋಪಕ್ಕೆ ಕಾರಣವಾಯಿತು. ಕೋಪಗೊಂಡ ರಾಜನಿಂದ ಗಡಿಪಾರು ಶಿಕ್ಷೆಗೆ ಒಳಗಾದ ಮಾಲ್ಯವಂತ ಪಂಪಾಕ್ಷೇತ್ರಕ್ಕೆ ಬಂದು ನೆಲಸುತ್ತಾನೆ. ಈ ಗಿರಿಯಲ್ಲಿದ್ದುಕೊಂಡು ಅಲ್ಲಿನ ಋಷಿ ಮುನಿಗಳಿಗೂ ಹೂಮಾಲೆಗಳನ್ನು ಮಾಡಿಕೊಡುವ ತನ್ನ ಕಾಯಕವನ್ನು ಮುಂದುವರೆಸುತ್ತಾನೆ. ಇದರಿಂದ ಮುನಿಗಳ ಕೃಪೆಗೆ ಪಾತ್ರನಾಗಿ, ಅವರ ಸಲಹೆಯಂತೆ ಶಿವ ಪಂಚಾಕ್ಷರ ಮಂತ್ರೋಪದೇಶದೊಂದಿಗೆ ತಪಸ್ಸನ್ನಾಚರಿಸಿದನು. ಇವನ ತಪಸ್ಸಿಗೆ ಮೆಚ್ಚಿ ಪ್ರತ್ಯಕ್ಷನಾದ ವಿರೂಪಾಕ್ಷ ಮಾಲ್ಯವಂತನಿಗೆ ವರಗಳನ್ನು ದಯಾಪಾಲಿಸಿ, ಇಂದಿನಿಂದ ನೀನು ನೆಲಸಿರುವ ಈ ಪರ್ವತ **'ಮಾಲ್ಯವಂತ'** ಎಂಬ ಹೆಸರಿನಿಂದ ಪ್ರಸಿದ್ಧವಾಗಲಿ ಎಂದು ವರ ನೀಡಿದನು. ಅಂದಿನಿಂದ ಈ ಪರ್ವತಕ್ಕೆ ಮಾಲ್ಯವಂತ ಎಂಬ ಹೆಸರು ಬಂದಿತು ಎಂಬುದು ಈ ಕಥೆಯ ಫಲಿತಾಂಶ.

ಇದೇ ಪಂಪಮಹಾತ್ಮೆ ರಾಮಾಯಣಕ್ಕೆ ಸಂಬಂಧಿಸಿ ಮಾಲ್ಯವಂತ ಕಥೆಯನ್ನು ದಾಖಲಿಸುತ್ತದೆ. ಇದರಂತೆ ಸೀತೆಯ ಹುಡುಕಾಟದಲ್ಲಿ ರಾಮ ಮತ್ತು ಲಕ್ಷ್ಮಣರು ಚಿಂತಾಕ್ರಾಂತರಾಗಿದ್ದಾಗ, ಮಾಲ್ಯವಂತನೆಂಬ ಮುನಿ ರಾಮ–ಲಕ್ಷ್ಮಣರಿಗೆ ವಿರೂಪಾಕ್ಷನನ್ನು ಧ್ಯಾನಿಸುವಂತೆ ಸಲಹೆ ನೀಡುತ್ತಾನೆ. ಮಾಲ್ಯವಂತದ ಬಗೆಗಿನ ಪಂಪಮಾಹತ್ಮೆಯ ಕಥೆಗಳೇನೇ ಇರಲಿ, ಈ ಕಾಲಕ್ಕಾಗಲೇ ರಘುನಾಥ ಬೆಟ್ಟ ಮಾಲ್ಯವಂತವೆಂದು ಪ್ರಸಿದ್ಧವಾಗಿತ್ತು.

ರಾಘವಾಂಕ ತನ್ನ 'ಹರಿಶ್ಚಂದ್ರ ಕಾವ್ಯ'ದಲ್ಲಿ ಭಕ್ತಿ, ಜ್ಞಾನ ಮತ್ತು ವೈರಾಗ್ಯದ ಹಿನ್ನೆಲೆಯಲ್ಲಿ ಹೇಮಕೂಟದ ಮಹತ್ವವನ್ನು ಹೇಳುವಾಗ **............ಹೇಮಕೂಟ ಮತ್ತದು ಮತಂಗಾದ್ರಿ ಹೋಗದು ಮಾಲ್ಯವಂತ ವಿಂತವಱ ಮಹಿಮೆಗಳಾನಾ ಮದನ ಹರನೇ ಬಲ್ಲನೆಂದು ತೋರಿದನು ಭೂತನಾತಂಗೆ ಮುನಿನಾಥನು॥** ಎಂಬಲ್ಲಿ ಮಾಲ್ಯವಂತ ಪರ್ವತವನ್ನು ಹೆಸರಿಸಿದ್ದಾನೆ. ಲಕ್ಕಣ್ಣದಂಡೇಶ ತನ್ನ ಶಿವತತ್ವ ಚಿಂತಾಮಣಿಯಲ್ಲಿ **ಅಲ್ಲಿರ್ಪುದೊಲುಮೆಯಿಂ ಮಾಲ್ಯವಂತಾಚಲಂ** ಎಂದು ಮಾಲ್ಯವಂತ ಪರ್ವತವನ್ನು ಹೆಸರಿಸಿದ್ದಾನೆ. ಕ್ರಿ.ಶ. ಹದಿನಾರನೇ ಶತಮಾನದ ವೇಳೆಗೆ ಅಂದರೆ, ವಿಜಯನಗರ ಆಳ್ವಿಕೆಯ ಕಾಲಕ್ಕಾಗಲೇ ಮಾಲ್ಯವಂತ ರಘುನಾಥ ಮಾಲ್ಯವಂತವೆಂಬುದಾಗಿ ಪ್ರಸಿದ್ಧವಾಗಿತ್ತು.[5]

**ಮತ್ತಿ ತಿಮ್ಮಣ್ಣನಾಯಕನ ಶಾಸನಗಳಲ್ಲಿ ಮಾಲ್ಯವಂತ**

ಮಾಲ್ಯವಂತ ರಘುನಾಥ ಕ್ರಿ.ಶ. 1559ರ ಕಾಲಕ್ಕಾಗಲೇ ಪ್ರಸಿದ್ಧವಾಗಿತ್ತು ಹಾಗೂ ಸದಾಶಿವರಾಯನ ಕಾಲದ ಶಾಸನಗಳಲ್ಲಿ ಮಾಲ್ಯವಂತದ ಪ್ರಸ್ತಾಪಗಳು ಕಂಡುಬಂದಿದ್ದವು. ವಿಜಯನಗರದ ಚಕ್ರವರ್ತಿ ಸದಾಶಿವರಾಯನ ಕಾಲಕ್ಕೇ ಸೇರಿರುವ, ಚಿತ್ರದುರ್ಗ ಪಾಳೆಯಗಾರ ಮತ್ತಿ ತಿಮ್ಮಣ್ಣನಾಯಕನ ಎರಡು ಶಾಸನಗಳು ರಘುನಾಥ ಮಾಲ್ಯವಂತಕ್ಕೆ ದಾನ ನೀಡಿರುವ ಮಾಹಿತಿಯನ್ನು ನೀಡುತ್ತವೆ.

ತಿಮ್ಮಣ್ಣನಾಯಕನ ಶಾಸನಗಳಿಂದ ವೈಯಕ್ತಿಕ ಹಾಗೂ ಸಾಮುದಾಯಿಕವಾಗಿ ತಿಮ್ಮಣ್ಣನಾಯಕನು ಕೈಗೊಳ್ಳುತ್ತಿದ್ದ ಧಾರ್ಮಿಕ ಹಾಗೂ ಜನೋಪಯೋಗಿ ಕಾರ್ಯಗಳು ಸ್ಪಷ್ಟವಾಗಿ ವ್ಯಕ್ತವಾಗುತ್ತವೆ. ಧರ್ಮವೇ ನಿಜವಾದ ಬಂಧು. ಧರ್ಮ ಎಂದರೆ ಎಲ್ಲರಿಗೂ ಅನ್ವಯವಾಗುವಂತಹ, ಸರ್ವರಿಗೂ ಸಮಾನವಾದ ಹಾಗೂ ಎಲ್ಲ ಧರ್ಮಗಳು ಎತ್ತಿಯಿಡಿಯುವ ದಾನಕಾರ್ಯಗಳು ಪುಣ್ಯಕಾರ್ಯಗಳು. ದಾನಧರ್ಮಗಳಿಂದ ಪುಣ್ಯ ಸಿಗುವುದೆಂಬ ಧಾರ್ಮಿಕ ನಂಬಿಕೆ ಮತ್ತು ಗೌರವ–ಪ್ರತಿಷ್ಠೆಯನ್ನು ಹೊಂದಬೇಕೆಂಬ ಸಾಮಾಜಿಕ ಬಯಕೆ ಧಾರ್ಮಿಕ ಮೌಲ್ಯಗಳಿಂದ ಪ್ರಭಾವಿತವಾಗಿರುತ್ತವೆ. ತಿಮ್ಮಣ್ಣನಾಯಕನ ಶಾಸನಗಳಿಂದ ಅವನಿಗಿದ್ದ ಇಂತಹ ಸಾಮುದಾಯಿಕ ಹೊಣೆಗಾರಿಕೆಯ ಪ್ರಜ್ಞೆ ವ್ಯಕ್ತವಾಗುತ್ತದೆ. ಮಾಲ್ಯವಂತಕ್ಕೆ ತಿಮ್ಮಣ್ಣನಾಯಕ ನೀಡಿರುವ ದಾನವನ್ನು ಹಿರಿಯೂರಿನ ರಂಗಸಮುದ್ರದ ಕೆರೆಯ ನಾರಸೀಂಗನ ಜಮೀನಿನಲ್ಲಿ ಕಂಡುಬಂದಿರುವ ಎರಡು ಶಾಸನಗಳು ದೃಢಪಡಿಸುತ್ತವೆ.

**ಶಾಸನ ಸಂಖ್ಯೆ : 1**

**ಹಿರಿಯೂರು ತಾಲೂಕು ರಂಗಸಮುದ್ರದ ಕೆರೆಯ ಕೆಳಗೆ ಇರುವ ನಾರಸೀರಂಗನ ಜಮೀನಿನಲ್ಲಿರುವ ಕಲ್ಲಿನ ಮೇಲಿರುವ ಶಾಸನದ ಪಾಠ:**

1. ಶ್ರೀಗಣಾದಿಪತೇನಮ. . . ಶ್ರೀಜಯಾದ್ಭುಶಾಲಿವಾಹನಶಕ
2. ವರುಷಂಬುಲು 1467 ಅಗುನಟಿಸೊಬಾನುಸಂವತ್ಸರಂಮಾ
3. ರ್ಗಶಿರಬ 5 . . . . . . . . . . . . . ಯ . . . . . . . . .
4. ಶ್ರೀಮನಮಹಾರಾಜಾಧಿರಾಜರಾಜ . . . . . . . .
5. . . . . . . . ಪ್ರತಾಪಶ್ರೀವೀರ . . . . . . . . . . . . . .

6. . . . . . . . . . . .ಯಲು. . . . . . . . ನಗರ
7. . . . . . . . .ಪಾಸ . . . . . . . . . . . ರಾ
8. . . . . . . . ಗಾನ. . . . . . . . ಮದನಾ
9. ಯರುವೈನ . . . . . . . . . . . . . . . .
10. . . . . . . . . . . . . ನಿಕ್ಷೇ . . . . . . .
11. . . ಶ್ರೀಮನ್ಮಹಾನಾಯಕಾಚಾ . . . . . .
12. . . . . . ನಾಯಸಿಂಗಾರಿಕಿ . . . ಪಮಕಾಮುಗೆತ್ತಿತಿಂಮ್ಮ
13. . . . . . . ಶ್ರೀಮತೇರಾಮಾನುಜಾಯನಮಃ ಶ್ರೀಮ
14. ದ್ವೇದಮಾರ್ಗಪ್ರತಿಷ್ಠಾಪನಾಚಾರ್ಯ್ಯ ಪರಮಹಂ[ಸ]ಪರಿವ್ರಾ[ಜ]ಕಾ
15. ಚಾರ್ಯ್ಯ . . . . ಚಾರ್ಯ್ಯವೈನಶ್ರೀಮಾಲ್ಯವಂತಂರಾಮಾನು
16. ಜಜೀಯ್ಯಲುಅಯ್ಯವಾರಿಕಿಕಾಮುಗೆತ್ತಿಹನುಮಿನಾಯನಿಂಗಾರಿ
17. ಕೊಮಾರುಡುಕಾಮಿಗೆತ್ತಿತಿಂಮಣನಾಯನಿಂಗಾರುತಂಮಎಲಿ . .
18. ಮಿರಾ. ರಾಜಯತಿರುಮಲರಾಜಯ . . . ಪುಂಣಿಮುಗಾ
19. ನುಉತ್ತನದ್ವಾದಸಿಪುಂಣ್ಯಕಾಲಮಂದುಹಂಪಾವಿರೂಪಾಕ್ಷದೇ
20. ವುನಿಸಂನ್ನಿಧಿ . . ಲಶ್ರೀಮಾಲ್ಯವಂತಂರಘುನಾಯಕುಲಸನ್ನಿ
21. . . ರದ . . . . . ಹರೇಣಸ್ವದತಂನಿಷ್ಫಲಂಭವೇತ್ ಶ್ರೀ . .
22. . . . ಮಾನಿಕಿ . . ಲಚಿನವಾರಿಕಿ . . ಸ್ತಿಲೋನು . . . .
23. . . . . . . ಕಂ . . . . . . . . . . . . . . . . . .
24. . . . . . . . . . . . . ಶ್ರೀ ಶ್ರೀ[6]

ಈ ಶಿಲಾಶಾಸನ ದ್ವಿ ಭಾಷಾ ಶಾಸನವಾಗಿದೆ. ಶಾಸನದ ಪ್ರಾರಂಭದ ಮೊದಲ ಸಾಲಿನಿಂದ ಸುಮಾರು ಹತ್ತನೆ ಸಾಲಿನವರೆಗೂ ಕನ್ನಡ ಭಾಷೆ ಮತ್ತು ಕನ್ನಡ ಲಿಪಿಯಲ್ಲಿ ಬರೆಯಲ್ಪಟ್ಟಿದೆ. ಮೂರನೇ ಸಾಲಿನಿಂದ ಹತ್ತನೇ ಸಾಲಿನವರೆಗಿನ ಸಾಲುಗಳು ಸವಕಲಾಗಿದ್ದು, ಅಲ್ಲಲ್ಲಿ ಅಕ್ಷರಗಳು ಅಳಿಸಿಹೋಗಿವೆ. ಹನ್ನೊಂದನೇ ಸಾಲಿನಿಂದ ಇಪ್ಪತ್ತನಾಲ್ಕನೇ ಸಾಲಿನವರೆಗೆ, ತೆಲುಗು ಭಾಷೆ ಮತ್ತು ಕನ್ನಡ ಲಿಪಿಯಲ್ಲಿ ಬರೆಯಲ್ಪಟ್ಟಿದೆ. ಈ ಶಾಸನದ ಕಾಲ ಶಕವರ್ಷ 1467, ಸ್ವಭಾನು ಸಂವತ್ಸರ, ಮಾರ್ಗಶಿರ ಬಹುಳ 5. ಕ್ರಿ.ಶ. 1583 ನವಂಬರ್ 23 ಶನಿವಾರಕ್ಕೆ ಸರಿ ಹೊಂದುತ್ತದೆ.[7] ಈ ಶಿಲಾಶಾಸನವು ವಿಜಯನಗರದ ಚಕ್ರವರ್ತಿ ಸದಾಶಿವರಾಯನ ಕಾಲದ್ದಾಗಿದೆ. ಈ ಶಾಸನವನ್ನು ಹೊರಡಿಸಿದವನು ಚಿತ್ರದುರ್ಗ ಪಾಳೆಯಗಾರ ಮತ್ತಿ ತಿಮ್ಮಣ್ಣನಾಯಕ. ಶ್ರೀಮನ್ಮಹಾನಾಯಕಚಾರ್ಯ ಕಾಮಗೇತಿ ತಿಮ್ಮಣ್ಣನಾಯಕ ಮಾಲ್ಯವಂತ ರಾಮಾನುಜಜೀಯ್ಯನಿಗೆ ಹಾಗೂ ವಿಜಯನಗರದ ಅರಸು ತಿರುಮಲರಾಯನಿಗೆ ಪುಣ್ಯವನ್ನು ಬಯಸಿ ಈ ಶಾಸನವನ್ನು ಹೊರಡಿಸಿದ್ದಾನೆ. ಕ್ರಿ.ಶ. 1583ರ ನವಂಬರ್ 23 ರಂದು (ಶಕವರ್ಷ 1467) ಉತ್ಥಾನ ದ್ವಾದಶಿ ಪುಣ್ಯಕಾಲದಂದು

ಹಂಪಾವಿರುಪಾಕ್ಷ ಮತ್ತು ಶ್ರೀಮಾಲ್ಯವಂತ ರಘುವಂಥನಾಯಕನ ಸನ್ನಿಧಿಯಲ್ಲಿ ದಾನ ನೀಡಿರುವ ಮಾಹಿತಿಯನ್ನು ಈ ಶಾಸನ ದಾಖಲಿಸುತ್ತದೆ.

**ಶಾಸನ ಸಂಖ್ಯೆ : 2**

**ಹಿರಿಯೂರು ತಾಲೂಕು ರಂಗಸಮುದ್ರದ ಕೆರೆಯ ಕೆಳಗೆ ಇರುವ ನಾರಸೀರಂಗನ ಜಮೀನಿನಲ್ಲಿರುವ ಕಲ್ಲಿನ ಎಡಭಾಗದಲ್ಲಿರುವ ಶಾಸನದ ಪಾಠ:**

1. ದೀನಿಕಿನಿಶ್ರೀಮದ್ವೇದಮಾರ್ಗಪ್ರತಿಷ್ಠಾಪನಾಚಾರ್ಯ್ಯಪರಮಹಂಸ
2. ಪರಿವ್ರಾಜಕಾಚಾರ್ಯ್ಯವೇದಾಂತಾಚಾರ್ಯ್ಯಲುನಶ್ರೀಮಾ
3. ಲ್ಯಮತರಾಮಾನುಜಜೀಯ್ಯ ಅಯ್ಯವಾರಿಕಿಧಾರಪೋಶಿಇಚ್ಚಿನ
4. ಭೂದಾನಧರ್ಮಶಾಸನಮೆಟ್ಟುಅನನುಮಾನಾಯಂಕತಾ
5. ನಕುಸದಾಸಿವದೇವಮಹಾಹರಾಯಲುಂಗಾರುಪಾಲಿಂಚಿನಕುಂತಣ
6. ದೇಶಮು . . ಪರಿಶೀಮಲೋನಿನಂದನ . ಸೋಮಸ್ತಲಮು
7. ಲೋನಿಅರಕೆರೇಗ್ರಾಮಮುಧಾರಾಪೂರ್ವಕಂಗಾನುಇಸ್ತಿಮಿ.
8. ನಶ್ರೀಮನಮಹನಾಯಕಾಚಾರ್ಯ್ಯಕಾಮುಗೆತ್ತಿಹನಿಮಿನಾ
9. ಯನಿಂಗಾರಿಕೊಮಾರುಡುಕಾಮುಗೆತ್ತಿತಿಂಮ್ಮಂಣಯನಿಂಗಾ
10. ರುತಮತಂಡ್ರಿಹನಿಮಿನಾಯಿನಿಂಗಾರಿಕಿಪುಣ್ಯಅಯಿ
11. ಅಟ್ಲಂಗಾನುಶ್ರೀಮದ್ವೇದಮಾರ್ಗಪ್ರತಿಷ್ಠಾಪನಾಚಾರ್ಯ್ಯಪ
12. ರಮಹಂಸಪರಿಪ್ರಾಜಕಾಚಾರ್ಯ್ಯವೇದಾಂತ್ತಚಾರ್ಯ್ಯಲೈ
13. ನಶ್ರೀಮಾಲ್ಯವಂತಮುರಾಮಾನುಜಜೀಯ್ಯಲುಅಯ್ಯವಾರಿಕಿ
14. ತ್ರಿವಾಚಕಂಗಾನುತುಂಗಭದ್ರಾತೀರಮಂದುಅರೆಕೆರ್ರೆಗ್ರಾ
15. ಮಮುಧಾರಾಪೋಶಿಇಸ್ತಿಮಿಂಗಾನಗ್ರಮಾನನುಕಲಿಗಿನನಿಧಿ
16. ನಿಕ್ಷೇಪಜಲಪಾಷಾಣಅಕ್ಷೀಣಿಅಗಾಮಿಸಿದ್ಧಸಾಧ್ಯಂಬುಲು
17. ತಾನುಅಷ್ಟಭೋಗತೇಶ್ವಾಮ್ಯಂಗಾನುನೀರಾರಂಬಮುಕಡಾರಂಬ
18. ಮುಸುಕಲಸುವರ್ನ್ನಅದಾಯಮುಂನುಚೆರುಉನುತೋಟಲುನು
19. . . ಲುನುಫಲರುಕ್ಷಾಲುಸಹಗಾನುಧರಪೋಶಿಇಸ್ತಮಿಂಗಾನಮಿ
20. ಶಿಸ್ಯಪಾರಂಪರ್ಯ್ಯಮುಂಗಾನುಆಚಂದ್ರಾರ್ಕ್ಕಸ್ಥಾಇಂಗಾನುಸುಖಾ
21. ನಅನುಭವಿಂಚ್ಚಿಸೂಕಾನಉಂಡೇದಿಶ್ರದತ್ತಾನ್ದಿಗುಣಂಪುಣ್ಯ
22. (ಮುಂದೆ ಬರವಣಿಗೆ ಇಲ್ಲ)[8]

ಈ ಶಿಲಾಶಾಸನ ತೆಲುಗು ಭಾಷೆ ಮತ್ತು ಕನ್ನಡ ಲಿಪಿಯಲ್ಲಿ ಬರೆಯಲ್ಪಟ್ಟಿದೆ. ಇದರ ಕಾಲ ಕ್ರಿ.ಶ. 1583 ಆಗಿದ್ದು, ಈ ಶಾಸನವೂ ವಿಜಯನಗರದ ಅರಸ ಸದಾಶಿವರಾಯನ ಕಾಲಕ್ಕೇ ಸೇರಿದೆ. ಚಿತ್ರದುರ್ಗದ ಅರಸು

ಕಾಮಗೇತಿ ತಿಮ್ಮಣ್ಣನಾಯಕ ಹೊರಡಿಸಿರುವ ಈ ಶಾಸನದಲ್ಲಿ, ತನ್ನ ತಂದೆ ಹನುಮಿನಾಯಕನಿಗೆ ಪುಣ್ಯವಾಗಲೆಂದು ನೀಡಿರುವ ದಾನವನ್ನು ಪ್ರಸ್ತಾಪಿಸಲಾಗಿದೆ. ವೇದಾಂತಚಾರ್ಯ ಮಾಲ್ಯವಂತ ಶ್ರೀರಾಮಾನುಜಜೀಯ್ಯರಿಗೆ, ತಿಮ್ಮಣ್ಣನಾಯಕ ಅರಕೆರೆಯ ಗ್ರಾಮವನ್ನು ದಾನನೀಡಿ, ತುಂಗಭದ್ರ ನದಿತೀರದಲ್ಲಿ ತನ್ನ ತಂದೆಗೆ ಪುಣ್ಯವಾಗಲೆಂದು ಪ್ರಾರ್ಥಿಸಿಕೊಂಡಿದ್ದಾನೆ. ಇದರಿಂದ ಅಂದಿನ ಕಾಲಕ್ಕೆ ತುಂಗಭದ್ರ ನದಿ ಪವಿತ್ರತೆಯ ಕೇಂದ್ರವಾಗಿತ್ತು ಎನ್ನಬಹುದು.

ಈ ಎರಡೂ ಶಾಸನಗಳಲ್ಲಿ ಪ್ರಸ್ತಾಪಿಸಿರುವ ರಾಮಾನುಜಜೀಯ್ಯಚಾರ್ಯ ಎಂಬುವರು ಪ್ರಸಿದ್ಧ ಆಚಾರ್ಯನಾಗಿದ್ದು, ವೈಷ್ಣವ ಮತಸ್ಥನಾಗಿದ್ದರು. ಇವನು ತುಂಗಭದ್ರ ನದಿ ತೀರದ ಪ್ರದೇಶ ಅಂದರೆ ಹಂಪೆಯಲ್ಲಿ ಮದ್ವೇದಮಾರ್ಗವನ್ನು ಪ್ರತಿಷ್ಠಾಪಿಸಿದ್ದ ಆಚಾರ್ಯನಾಗಿದ್ದರು. ತುಳುವ ಸಂತತಿ ವೈಷ್ಣವ ಧರ್ಮದ ಅನುಯಾಯಿಯಾಗಿತ್ತು ಎಂಬುದನ್ನು ಈ ಶಾಸನ ದೃಢಪಡಿಸುತ್ತದೆ. ಕೃಷ್ಣದೇವರಾಯನಂತೆಯೇ ಸದಾಶಿವರಾಯನೂ ತನ್ನ ಆಡಳಿತದಲ್ಲಿ ತೆಲುಗು ಭಾಷೆಗೆ ಆಧ್ಯತೆ ನೀಡಿದ್ದ ಅಂಶವೂ ಇದರಿಂದ ಸ್ಪಷ್ಟವಾಗುತ್ತದೆ. ವಿಜಯನಗರದ ಸದಾಶಿವರಾಯನಿಂದ ಕ್ರಿ.ಶ. 1556ರಲ್ಲಿ ಹೊಳಲ್ಕೆರೆಯನ್ನು ಅಮರ ಮಾಗಣಿಯಾಗಿ ಪಡೆದು, ಕ್ರಿ.ಶ. 1573ರಿಂದ ಚಿತ್ರದುರ್ಗದಲ್ಲಿ ಸ್ವತಂತ್ರ ಸಂಸ್ಥಾವನ್ನು ಸ್ಥಾಪಿಸಿದ್ದ ಚಿತ್ರದುರ್ಗ ಪಾಳೆಯಗಾರರು ವೈಷ್ಣವ ಮತಾವಲಂಭಿಗಳಾಗಿಯೇ ಮುಂದುವರೆದಿದ್ದರು. ಚಿತ್ರದುರ್ಗ ಪಾಳೆಯಗಾರರು ವೈಷ್ಣವ ಧರ್ಮದವರು ಎಂಬುದನ್ನು ಅವರ ಕಾಲದಲ್ಲಿ ನಿರ್ಮಿಸಿರುವ ಲಕ್ಷ್ಮೀನರಸಿಂಹ ಸ್ವಾಮಿ ಹಾಗೂ ರಂಗನಾಥಸ್ವಾಮಿ ದೇವಾಲಯಗಳು ಸ್ಪಷ್ಟಪಡಿಸುತ್ತವೆ. ದೊರೆ ಚಿಕ್ಕಣ್ಣನಾಯಕನ ಕಾಲದಲ್ಲಿ ರಾಜ ಪರಿವಾರದವರೆಲ್ಲಾ 'ಲಿಂಗಾಯತ ಧರ್ಮ'ಕ್ಕೆ ಮತಾಂತರಗೊಂಡು ಕೆಲವೇ ದಿನಗಳಲ್ಲಿ ಪುನಃ ಮೂಲ ಧರ್ಮವಾದ ವೈಷ್ಣವ ಧರ್ಮಕ್ಕೆ ಹಿಂತಿರುಗಿರುವ ಘಟನೆ ಇವರ ವೈಷ್ಣವ ಧರ್ಮದ ಸ್ಪಷ್ಟನೆಗೆ ಮತ್ತೊಂದು ನಿದರ್ಶನವಾಗುತ್ತದೆ.

ಈ ನಿಟ್ಟಿನಲ್ಲಿ ವೈಷ್ಣವ ಶ್ರೀಮದ್ವೇದಮಾರ್ಗ ಪ್ರತಿಷ್ಠಾಪನಾಚಾರ್ಯ ರಾಮಾನುಜಜೀಯ್ಯರಿಗೆ, ರಘುನಾಥ ಮಾಲ್ಯವಂತದ ಪುಣ್ಯ ಕೇಂದ್ರವಾದ ವಿಜಯ ವಿಠ್ಠಲಸ್ವಾಮಿ ನೆಲೆಸಿರುವ ತುಂಗಭದ್ರ ನದಿ ತೀರದಲ್ಲಿ, ತಮ್ಮ ತಂದೆಗೆ ಪುಣ್ಯವಾಗಲೆಂದು ಮತ್ತಿ ತಿಮ್ಮಣ್ಣನಾಯಕ ತನ್ನ ಆಳ್ವಿಕೆಯ ಪ್ರಾರಂಭದ ಕೇಂದ್ರವಾಗಿದ್ದ, ಹಿರಿಯೂರಿನ ರಂಗಸಮುದ್ರದ ಬಳಿಯ ಅರಕೆರೆಯನ್ನು ದಾನವಾಗಿ ನೀಡಿದ್ದನು. ಚಿತ್ರದುರ್ಗ ಪಾಳೆಯಗಾರರ ವೈಷ್ಣವ ಧರ್ಮನಿಷ್ಠೆಗೆ ಈ ಎರಡು ಶಾಸನಗಳು ಸಾಕ್ಷಿಗಳಾಗಿವೆ.

**ಕೊನೆಟಿಪ್ಪಣಿಗಳು**


1. ಗಂಗಾನಾಯಕ್, ಎ.ಎಂ. (ಪ್ರ.ಸಂ). (2012). *ಪಾಳೆಯಗಾರರ ಶಾಸನಗಳು, ಸಂ.1,* ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು. ವಿವಿಧ ಪುಟಗಳಿಂದ ಸಂಗ್ರಹ.
2. ಬೆನಗಲ್ ರಾಮರಾವ್., ಪಾನ್ಯಂ ಸುಂದರಶಾಸ್ತ್ರಿ. (1941). *ಪುರಾಣನಾಮ ಚೂಡಾಮಣಿ.* ಮೈಸೂರು ವಿಶ್ವವಿದ್ಯಾಲಯ, ಮೈಸೂರು. ಪು. 466.
3. ಅದೇ, ಪು. 467.

4. ಶಿವಶಂಕರ,ಎಂ.ಎಲ್. (1996). *ವಿಜಯನಗರ ಅಧ್ಯಯನ, ಸಂ.2.* ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು. ಪು. 108.
5. ಬೆನಗಲ್ ರಾಮರಾವ್, ಪಾನ್ಯಂ ಸುಂದರಶಾಸ್ತ್ರಿ. (1941). ಪೂರ್ವೋಕ್ತ, ಪು. 468.
6. ಗಂಗಾನಾಯಕ್, ಎ.ಎಂ. (2012). ಪೂರ್ವೋಕ್ತ, ಪು.11–12
7. ಅದೇ. ಪು.11.
8. ಅದೇ, ಪು. 13–14.


**ಆಕರ ಗ್ರಂಥಗಳು**


- ಚಿನ್ನಸ್ವಾಮಿ ಸೋಸಲೆ, ಎನ್. (ಸಂ.) (2009). *ಚರಿತ್ರೆ ಅಧ್ಯಯನ, ಸಂ.5,* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ಗಂಗಾನಾಯಕ್, ಕೆ.ಎನ್. (ಪ್ರ.ಸಂ.) (2012). *ಪಾಳೆಯಗಾರರ ಶಾಸನಗಳು ಸಂ.1,* ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ.
- ಜಯ್ಯಮ್ಮ ಕರಿಯಣ್ಣ, ಎಚ್. (2010). *ಶಾಸನಗಳಲ್ಲಿ ದಾನದತ್ತಿಗಳು.* ಕನ್ನಡ ಸಾಹಿತ್ಯ ಪರಿಷತ್ತು.
- ನಂಜುಂಡಸ್ವಾಮಿ, ಎ.ಎಸ್. (2012). *ಪಾಳೆಯಗಾರರು ಮತ್ತು ಒಡೆಯರ ಇತಿಹಾಸ.* ಸಮಾಜ ಪುಸ್ತಕಾಲಯ.
- ಪುಟ್ಟಣ್ಣ, ಎಂ. ಎಸ್. (1997). *ಚಿತ್ರದುರ್ಗದ ಪಾಳೆಯಗಾರರು.* ಮದಕರಿ ಪ್ರಕಾಶನ.
- ಶಿವಶಂಕರ, ಎಂ.ಎಲ್. (1996). *ವಿಜಯನಗರ ಅಧ್ಯಯನ.* ಸಂ.1, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ.